**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ.101/2018**

| | | | |
|---|---|---|---|
| ಹೆಸರು | : | ರೇವಣಸಿದ್ದಯ್ಯ | ದೋ.ಸಾ. 9 |
| ತಂದೆಯ ಹೆಸರು | : | ಶಂಕ್ರಯ್ಯ | ಪ್ರಾ.ಸಾ. 7 |
| ವಯಸ್ಸು | : | 44 ವರ್ಷ | ದಿನಾಂಕಃ 04-03-2022 |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಬಟಗೇರಾ | |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಆರೋಪಿತರು ನನಗೆ ಗೊತ್ತು.ಅದೇ ರೀತಿ ಪ್ರಕರಣದ ಸಾಕ್ಷಿದಾರರಾದ ಚಾಸಾ-1, 10 ಮತ್ತು 11 ನನಗೆ ಗೊತ್ತು. ಚಾಸಾ-1 ನನ್ನ ತಂಗಿ, ಚಾಸಾ-10 ನನ್ನ ಚಿಕ್ಕಮ್ಮ, ಚಾಸಾ-11 ನನ್ನ ಪರಿಚಯಸ್ಥರು ಮತ್ತು ಬಾಜುದವರು.

ನನ್ನ ತಂಗಿ ಚಾಸಾ-1 ರವರನ್ನು ಈ ಪ್ರಕರಣದ 1 ನೇ ಆರೋಪಿ ಸಂಗಯ್ಯನಿಗೆ ದಿನಾಂಕ 10-07-2016 ರಂದು ರಾಯಕೋಡದ ಶಿವಲಿಂಗೇಶ್ವರ ಮಠದಲ್ಲಿ ಮದುವೆ ಮಾಡಿಕೊಡಲಾಗಿತ್ತು. ಸದರಿ ಮದುವೆಯ ಸಂದರ್ಭದಲ್ಲಿ 1 ನೇ ಆರೋಪಿಗೆ ಆರು ಲಕ್ಷ ನಗದು ಹಣ, 5 ತೊಲೆ ಬಂಗಾರ ಮತ್ತು ಗೃಹೋಪಯೋಗಿ ವಸ್ತುಗಳನ್ನು ಕೊಟ್ಟಿದ್ದೆವು. ಮದುವೆಯಾದ ನಂತರ 1 ನೇ ಆರೋಪಿ ನನ್ನ ತಂಗಿ ಚಾಸಾ-1 ರವರನ್ನು ಚೆನ್ನಾಗಿ ನೋಡಿಕೊಡಿರುತ್ತಾನೆ.

ಮದುವೆಯಾದ ಒಂದು ತಿಂಗಳ ನಂತರ 1 ನೇ ಆರೋಪಿ ಮತ್ತು ಚಾಸಾ-1 ರವರ ನಡುವೆ ಸಮಸ್ಯೆ ಬಂದಿರುತ್ತದೆ ಮತ್ತು ಚಾಸಾ-1 ರವರು ಅದನ್ನು ನನಗೆ ಫೋನ್ ಮಾಡಿ ಹೇಳಿರುತ್ತಾಳೆ. ಚಾಸಾ-1 ರವರು ನನಗೆ ಫೋನಿನಲ್ಲಿ ಆರೋಪಿತರೆಲ್ಲರೂ ಸೇರಿ ತನಗೆ ಮಾನಸಿಕ ಕಿರುಕುಳ ಕೊಡುತ್ತಿದ್ದಾರೆಂದು ಹೇಳಿರುತ್ತಾರೆ. ರುದನೂರು ಗ್ರಾಮದಲ್ಲಿ ಮನೆ ಕಟ್ಟಿಸುತ್ತಿರುವುದರಿಂದ ಆರೋಪಿತರು ಚಾಸಾ-1 ರವರಿಗೆ ಇನ್ನೂ ಹೆಚ್ಚುವರಿಯಾಗಿ 2 ಲಕ್ಷ ಹಣ ಮತ್ತು 2 ತೊಲೆ ಬಂಗಾರ ತರುವಂತೆ ಬೇಡಿಕೆ ಇಟ್ಟಿದ್ದರು ಎಂದು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ. ಅದೇ ರೀತಿ ನನ್ನ ತಮ್ಮನ ಶಿವಾನಂದನ ಮದುವೆಯ ಸಂದರ್ಭದಲ್ಲಿಯೂ ಸಹ ಆರೋಪಿತರು 2 ತೊಲೆ ಬಂಗಾರ ಕೊಡಬೇಕೆಂದು ಚಾಸಾ-1 ರವರಿಗೆ ಬೇಡಿಕೆ ಇಟ್ಟಿರುತ್ತಾರೆ. ಆರೋಪಿತರ ಬೇಡಿಕೆಯಂತೆ ನಾವು 5

ಗ್ರಾಂ ಬಂಗಾರವನ್ನು ಕೊಟ್ಟರೂ ಸಹ ಆರೋಪಿತರು ಅದನ್ನು ತೆಗೆದುಕೊಂಡಿರುವುದಿಲ್ಲ.

ಆರೋಪಿತರಿಗೆ ನಮ್ಮ ಕುಟುಂಬದ ಹಿರಿಯರೆಲ್ಲರೂ ಬುದ್ಧಿ ಮಾತು ಹೇಳಿದರೂ ಸಹ ಅವರ ವರ್ತನೆಯಲ್ಲಿ ಬದಲಾವಣೆ ಮಾಡಿಕೊಳ್ಳದೆ ಚಾಸಾ-1 ರವರಿಗೆ ಸಮಸ್ಯೆ ಉಂಟುಮಾಡುತ್ತಿರುತ್ತಾರೆ.

ಈಗ್ಗೆ 4-5 ವರ್ಷದ ಹಿಂದೆ ಚಾಸಾ-1 ರವರನ್ನು ನೋಡಲು ನಾನು ಸೇಡಂ ಆಸ್ಪತ್ರೆಗೆ ಹೋಗಿದ್ದಾಗ ಆಕೆ ರುದನೂರು ಗ್ರಾಮದಲ್ಲಿರುವ ಆಕೆಯ ಗಂಡನ ಮನೆಯಲ್ಲಿ ಆರೋಪಿತರು ಎಲ್ಲರೂ ಸೇರಿ ಆಕೆಗೆ ಓಡ್ನಿಯಿಂದ ಕುತ್ತಿಗೆಗೆ ನೇಣು ಹಾಕಿದರು ಎಂದು ನನ್ನ ಬಳಿ ತಿಳಿಸಿರುತ್ತಾಳೆ. ಸದರಿ ಘಟನೆಯನ್ನು ನಾನು ನೋಡಿರುವುದಿಲ್ಲ. ಸದರಿ ಸಂದರ್ಭದಲ್ಲಿ ಚಾಸಾ-1 ರವರಿಗೆ ಪ್ರಜ್ಞೆ ಇರಲಿಲ್ಲ . ಪ್ರಜ್ಞೆ ಬಂದ ನಂತರ ಆಕೆ ಪೋಲೀಸರಿಗೆ ದೂರು ಕೊಟ್ಟಿದ್ದಾಳೆ.

ಈ ಪ್ರಕರಣದ ಸಂಬಂಧ ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದಾರೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಮದುವೆಯ ಸಂದರ್ಭದಲ್ಲಿ 1 ನೇ ಆರೋಪಿಗೆ ಚಾಸಾ-1 ರವರ ಮನೆಯವರು 6 ತೊಲೆ ಬಂಗಾರ ಮತ್ತು 2 ಲಕ್ಷ ಹಣ ಕೊಟ್ಟಿದ್ದರು ಎನ್ನುವುದು ಸರಿ. ಮದುವೆಯಾದ ಒಂದು ತಿಂಗಳ ನಂತರ ಚಾಸಾ-1 ರವರಿಗೆ ಆರೋಪಿತರು ಕಿರುಕುಳ ಕೊಡುತ್ತಿರುವ ವಿಚಾರವನ್ನು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ ಎನ್ನುವುದು ಸರಿ. ದಿನಾಂಕ 25-04-2017 ರಂದು ನಾನು , ಚಾಸಾ-7 , 8 , 12 ಮತ್ತು 14 ರವರು ಆರೋಪಿತರ ಮನೆಗೆ ಹೋಗಿ ಚಾಸಾ-1 ರವರಿಗೆ 5 ತೊಲೆ ಬಂಗಾರ ಮತ್ತು 2 ಲಕ್ಷ ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ಕೊಡುವುದು ಸರಿಯಲ್ಲ ಎಂದು, ಆ ರೀತಿ ತೊಂದರೆ ಕೊಡಬಾರದೆಂದು ಬುದ್ಧಿ ಹೇಳಿ ಬಂದಿರುತ್ತೇವೆ ಎನ್ನುವುದು ಸರಿ.

1 ಮತ್ತು 2 ನೇ ಆರೋಪಿತರು ಚಾಸಾ-1 ರವರಿಗೆ 5 ತೊಲೆ ಬಂಗಾರ ಮತ್ತು 2 ಲಕ್ಷ ಹಣ ತೆಗೆದುಕೊಂಡು ಬಾ ಎಂದು ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಟ್ಟಿದ್ದರಿಂದ ಅದನ್ನು ಸಹಿಸದೇ ದಿನಾಂಕ 11-10-2017 ರಂದು ಬೆಳಿಗ್ಗೆ 10 ಗಂಟೆಗೆ ಚಾಸಾ-1 ರವರು ತನ್ನ ಗಂಡನ ಮನೆಯಲ್ಲಿ ಯಾರೂ ಇಲ್ಲದೇ ಇದ್ದಾಗ ಓಡ್ನಿಯಿಂದ ನೇಣು ಹಾಕಿಕೊಂಡಿದ್ದು ಆ ಸಮಯದಲ್ಲಿ ಪಕ್ಕದ ಮನೆಯವರಾದ ಚಾಸಾ-2, 3 ಮತ್ತು 5 ರವರು ನೇಣು ಬಿಡಿಸಿರುತ್ತಾರೆ ಎಂದರೆ ಸಾಕ್ಷಿ ನಾನು

ನೋಡಿಲ್ಲ ಎನ್ನುತ್ತಾರೆ. ಆರೋಪಿತರು ಕಿರುಕುಳ ಕೊಟ್ಟಿದ್ದರಿಂದಲೇ ಚಾಸಾ-1 ರವರು ಓಢ್ನಿಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಪ್ರಯತ್ನಪಟ್ಟಿದ್ದಳೆಂದು ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆಎನ್ನುವುದು ಸರಿಯಲ್ಲ.

ಸಾಕ್ಷಿ ಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯಲ್ಲಿ 'ಕಾಮಾಕ್ಷಿ' ಎಂಬಲ್ಲಿನಿಂದ 'ಹೇಳಿಕೆ ನಿಜವಿರುತ್ತದೆ' ಎಂಬಲ್ಲಿಯವರೆಗಿನ ಭಾಗವನ್ನು ಈಗ ನಿಪಿ-6 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುತ್ತಾರೆ. ಕೋರಿಕೆಯನ್ನು ರೂ.200/- ಖರ್ಚಿನೊಂದಿಗೆ ಮುಂದೂಡಲಾಯಿತು.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಅಪರ ಪ್ರ.ದ.ನ್ಯಾ.ದಂ. ಚಿಂಚೋಳಿ**